## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 438 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 15.09.2022 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರದ ಸಾರಾಯಿಗಿಂತ ಅಧಿಕ ರೀತಿಯಲ್ಲಿ ಡಿಫೇನ್ಸ್ ಸಾರಾಯಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಕೆ.ಎಸ್.ಬಿ.ಸಿ.ಎಲ್ ನಿಂದ ಸರಬರಾಜಾದ ಮದ್ಯದ ಪ್ರಮಾಣಕ್ಕಿಂತ ಸಿ.ಎಸ್.ಡಿ ಕ್ಯಾಂಟೀನ್‌ಗಳಿಗೆ ಸರಬರಾಜಾದ ಮದ್ಯದ ಪ್ರಮಾಣವು ಗಣನೀಯವಾಗಿ ಕಡಿಮೆ ಪ್ರಮಾಣದಲ್ಲಿರುವುದನ್ನು ಕಾಣಬಹುದಾಗಿದೆ. ಬೀದರ್ ಜಿಲ್ಲೆಯಲ್ಲಿ ಮೂರು ಸಿಎಲ್-8 (ಸಿ.ಎಸ್.ಡಿ ಕ್ಯಾಂಟೀನ್) ಸನ್ನದುಗಳಿದ್ದು, ಈ ಮೂರು ಸನ್ನದುಗಳಿಂದ ಕರ್ನಾಟಕ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳ ಅಧಿಕೃತ ಸಿ.ಎಸ್.ಡಿ ಕ್ಯಾಂಟೀನ್ ಕಾರ್ಡನ್ನು ಹೊಂದಿರುವಂತಹ ಸುಮಾರು 4700 ಕಾರ್ಯನಿರತ ರಕ್ಷಣಾ ಸಿಬ್ಬಂದಿ/ ಮಾಜಿ ರಕ್ಷಣಾ ಸಿಬ್ಬಂದಿಗಳಿಗೆ ಡಿಫೆನ್ಸ್ ಸರ್ವೀಸ್ ಪರ್ಸನಲ್‌ಗಾಗಿ ಉತ್ಪಾದಿಸಲಾದಂತಹ ಮದ್ಯವನ್ನು ವಿತರಿಸಲಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ಕೆ.ಎಸ್.ಬಿ.ಸಿ.ಎಲ್ ನಿಂದ ಸರಬರಾಜಾದ ಮದ್ಯದ ಪ್ರಮಾಣ ಹಾಗೂ ಸಿ.ಎಸ್.ಡಿ ಕ್ಯಾಂಟೀನ್‌ಗಳಿಗೆ ಸರಬರಾಜಾದ ಮದ್ಯದ ಪ್ರಮಾಣದ ವಿವರಗಳು ಕೆಳಕಂಡಂತಿದೆ. |

| ಕ್ರ ಸಂ | ಅಬಕಾರಿ ಸಾಲು | ಕೆ.ಎಸ್.ಬಿ.ಸಿ.ಎಲ್ ನಿಂದ ಸರಬರಾಜಾದ ಮದ್ಯದ ಪ್ರಮಾಣ (ಪೆಟ್ಟಿಗೆಗಳು) | ಸಿ.ಎಸ್.ಡಿ ಕ್ಯಾಂಟೀನ್‌ಗಳಿಗೆ ಸರಬರಾಜಾದ ಮದ್ಯದ ಪ್ರಮಾಣ (ಪೆಟ್ಟಿಗೆಗಳು) |
|---|---|---|---|
| 1 | 2017-18 | 1115316 | 23199 |



Generated from eOffice by GOPALAIAH K. FD-EXCISE MIN(GK), EXCISE MINISTER, FINANCE DEPT.SEC on 14/09/2022 12:53 PM

| | | |
|---|---|---|
| | | <table><tr><td>2</td><td>2018-19</td><td>1111594</td><td>21140</td></tr><tr><td>3</td><td>2019-20</td><td>1169725</td><td>16873</td></tr><tr><td>4</td><td>2020-21</td><td>1158171</td><td>13872</td></tr><tr><td>5</td><td>2021-22</td><td>1297276</td><td>20371</td></tr></table> |
| ಆ) | ಇದರಿಂದ ಸರ್ಕಾರದ ಆರ್ಥಿಕ ಆದಾಯಕ್ಕೆ ಹೊಡೆತ ಬೀಳುತಿಲ್ಲವೆ; ಐದು ವರ್ಷಗಳ ಹಿಂದೆ ಜಿಲ್ಲೆಯಲ್ಲಿ ಇದ್ದಂತಹ ಹಾಗೂ ಈಗಿರುವ ಬಾರ್ ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ ಎಷ್ಟು; | ಡಿಫೆನ್ಸ್ ಮದ್ಯವು ಸಾರ್ವಜನಿಕರಿಗೆ ಮಾರಾಟಕ್ಕೆ ಅವಕಾಶವಿರುವುದಿಲ್ಲ. ಈ ಮದ್ಯವು ಕೇವಲ ಸಿ.ಎಸ್.ಡಿ ಕ್ಯಾಂಟೀನ್ ಕಾರ್ಡನ್ನು ಹೊಂದಿರುವಂತಹ ರಕ್ಷಣಾ ಸಿಬ್ಬಂದಿಗಳಿಗೆ ಮಾತ್ರ ಸರಬರಾಜು ಮಾಡುತ್ತಿದ್ದು, ಕೆ.ಎಸ್.ಬಿ.ಸಿ.ಎಲ್ ನಿಂದ ಸರಬರಾಜಾದ ಮದ್ಯದ ಪ್ರಮಾಣವು ಸಿ.ಎಸ್.ಡಿ ಕ್ಯಾಂಟೀನ್‌ಗಳಿಗೆ ಸರಬರಾಜಾದ ಪ್ರಮಾಣಕ್ಕಿಂತ ಗಣನಿಯವಾಗಿ ಹೆಚ್ಚಳವಿರುವುದರಿಂದ ಸರ್ಕಾರದ ಆರ್ಥಿಕ ಆದಾಯಕ್ಕೆ ಯಾವುದೇ ವ್ಯತಿರಿಕ್ತ ಪರಿಣಾಮ ಬೀರುತ್ತಿರುವುದಿಲ್ಲ.<br><br>ಬೀದರ್ ಜಿಲ್ಲೆಯಲ್ಲಿ 2017-18ನೇ ಸಾಲಿನಲ್ಲಿ 31 ಬಾರ್ & ರೆಸ್ಟೋರೆಂಟ್‌ಗಳು (ಸಿಎಲ್-9) ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ವರ್ಷದಲ್ಲಿಯೂ ಕೂಡ ಅದೇ ಸಂಖ್ಯೆಯ ಬಾರ್ & ರೆಸ್ಟೋರೆಂಟ್‌ಗಳು ಕಾರ್ಯನಿರ್ವಹಿಸುತ್ತಿವೆ. |
| ಇ) | ಐದು ವರ್ಷಗಳ ಹಿಂದೆ ಇದ್ದ ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಹೆಚ್ಚು ಆದಾಯ ಬರುತ್ತಿದ್ದರು ಪ್ರಸ್ತುತ ಸಮಯದಲ್ಲಿ ಕಡಿಮೆ ಆದಾಯ ಬರುತ್ತಿರುವುದಕ್ಕೆ ಕಾರಣಗಳೇನು; ಈ ಬಗ್ಗೆ ಸರ್ಕಾರ ಗಮನ ಹರಿಸದಿರಲು ಕಾರಣವೇನು; | ಬೀದರ್ ಜಿಲ್ಲೆಯಲ್ಲಿ 2017-18ನೇ ಸಾಲಿನಿಂದ ಪ್ರಸ್ತುತದವರೆಗೆ 31 ಬಾರ್ & ರೆಸ್ಟೋರೆಂಟ್‌ಗಳು (ಸಿಎಲ್-9) ಕಾರ್ಯನಿರ್ವಹಿಸುತ್ತಿವೆ. ಬೀದರ್ ಜಿಲ್ಲೆಯಲ್ಲಿ ಕಳೆದ 05 ವರ್ಷಗಳಲ್ಲಿ ಅಂದರೆ 2017-18 ರಿಂದ 2022-23 ರವರೆಗಿನ ಮದ್ಯದ ಎತ್ತುವಳಿಯನ್ನು ಗಮನಿಸಿದಾಗ ಕೋವಿಡ್ ಸಾಂಕ್ರಮಿಕ ರೋಗ ಹೆಚ್ಚಿದ್ದಂತಹ ಸಾಲುಗಳನ್ನು ಹೊರತುಪಡಿಸಿ ಇನ್ನುಳಿದ ಸಾಲುಗಳಲ್ಲಿ ಎತ್ತುವಳಿಯಲ್ಲಿ ಗುಣಾತ್ಮಕ ಬೆಳವಣಿಗೆ ಕಂಡುಬಂದಿದ್ದು, ಬೆಳವಣಿಗೆಯಲ್ಲಿನ ಏರಿಳಿತವು ಸ್ವಾಭಾವಿಕವಾಗಿ ಎಲ್ಲಾ ವಿಧದ |



Generated from eOffice by GOPALAIAH K FD-EXCISE MIN(GK), EXCISE MINISTER, FINANCE DEPT.SEC on 14/09/2022 12:53 PM

<table>
<tr><td></td><td></td><td>ಸನ್ನದುಗಳಲ್ಲಿನ ಕ್ರೋಢೀಕೃತ ಬೆಳವಣಿಗೆಯ ಸೂಚಕವಾಗಿರುತ್ತದೆ.<br><br>ಬೀದರ್ ಜಿಲ್ಲೆಯಲ್ಲಿ ಕಳೆದ 05 ವರ್ಷಗಳ ಮದ್ಯದ ಎತ್ತುವಳಿಯಲ್ಲಿನ ಬೆಳವಣಿಗೆಯ ಅಂಕಿ-ಅಂಶಗಳು ಕೆಳಕಂಡಂತಿದೆ.<br><br>
<table>
<tr><td>1</td><td>2017-18</td><td>1115316</td><td>+1.06</td></tr>
<tr><td>2</td><td>2018-19</td><td>1111594</td><td>-1.00</td></tr>
<tr><td>3</td><td>2019-20</td><td>1169725</td><td>+1.05</td></tr>
<tr><td>4</td><td>2020-21</td><td>1158171</td><td>-0.99</td></tr>
<tr><td>5</td><td>2021-22</td><td>1297276</td><td>+1.12</td></tr>
</table>
</td></tr>
<tr><td>ಈ)</td><td>ಕಳ್ಳಭಟ್ಟಿ ಸಾರಾಯಿ ಮತ್ತು ಡಿಫೆನ್ಸ್ ಸಾರಾಯಿಯ ದಂಧೆಗೆ ಇಲಾಖೆಯಿಂದ ರೈಡ್ ಮಾಡುವ ಕಾರ್ಯ ಸರ್ಕಾರದಿಂದ ಸ್ಥಗಿತಗೊಳಿಸಲಾಗಿದೆಯೇ;<br>ಸ್ಥಗಿತಗೊಳಿಸದಿದ್ದಲ್ಲಿ, ಏಕೆ ರೈಡ್‌ಗಳಾಗುತ್ತಿಲ್ಲ?</td><td>ಬೀದರ ಜಿಲ್ಲೆಯಲ್ಲಿ ನಿಯಮಿತವಾಗಿ ಜಾರಿ ಮತ್ತು ತನಿಖಾ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದು, ಅಬಕಾರಿ ಕಾನೂನಿನ ಉಲ್ಲಂಘನೆಗಳನ್ನು ಪತ್ತೆಮಾಡುವುದರ ಜೊತೆಗೆ ಕಳ್ಳಭಟ್ಟಿ ಸಾರಾಯಿ ಹಾಗೂ ಡಿಫೆನ್ಸ್ ಮದ್ಯಕ್ಕೆ ಸಂಬಂಧಿಸಿದ ಅಕ್ರಮಗಳನ್ನು ಪತ್ತೆಹಚ್ಚಲು ಸಹ ನಿರಂತರ ದಾಳಿ/ಶೋಧನೆ/ರಸ್ತೆಗಾವಲು/ಗಸ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕಳ್ಳಭಟ್ಟಿ ಕೇಂದ್ರಗಳ ನಿರ್ಮೂಲನೆಗಾಗಿ ಕ್ರಿಯಾಯೋಜನೆಯನ್ವಯ ನಿರಂತರವಾಗಿ ಜಾರಿ ಮತ್ತು ತನಿಖಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಬೀದರ್ ಜಿಲ್ಲೆಯಲ್ಲಿ ಇರುವ ಸಿ.ಎಸ್.ಡಿ ಕ್ಯಾಂಟೀನ್‌ಗಳನ್ನು ಹನ್ನೊಂದು ಬಾರಿ ತಪಾಸಣೆಗೆ ಒಳಪಡಿಸಿದ್ದು, ಡಿಫೆನ್ಸ್ ಮದ್ಯಕ್ಕೆ ಸಂಬಂದಿಸಿದ ಅಕ್ರಮಗಳನ್ನು ಪತ್ತೆನ ಹಚ್ಚಲು ಬೀದರ್ ನಗರದ ವಾಯುಪಡೆ ಕೇಂದ್ರದ ಗುಪ್ತಚರ ಘಟಕದೊಂದಿಗೆ ಸಂರ್ಪಕದಲ್ಲಿದ್ದು, ಸಿ.ಎಸ್.ಡಿ ಕೇಂದ್ರದ ಒಳಗಿನ ದೈನಂದಿನ ವಹಿವಾಟು ಹಾಗೂ ಹೊರಗೆ ಆಗಬಹುದಾದಂತಹ ಅಕ್ರಮಗಳನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.</td></tr>
</table>



Generated from eOffice by GOPALAIAH K, FD-EXCISE MIN(CK), EXCISE MINISTER, FINANCE DEPT.SEC on 14/09/2022 12:53 PM

| | | |
|---|---|---|
| | | ಬೀದರ್ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕಾ ಮತ್ತು ಮಾರಾಟ ಮಾಡುವಂತಹ ಕೇಂದ್ರಗಳ ಹಾಗೂ ಡಿಫೆನ್ಸ್ ಮದ್ಯ ಮಾರಾಟ ಮಾಡಬಹುದಾದಂತಹ ಸ್ಥಳಗಳ ಮೇಲೆ ಈವರೆಗೂ ಒಟ್ಟು 1902 ಶೋಧನೆ/ದಾಳಿಗಳನ್ನು ಕೈಗೊಂಡು ಒಟ್ಟು 171 ಪ್ರಕರಣಗಳನ್ನು ದಾಖಲಿಸಿ 894.600 ಲೀ. ಕಳ್ಳಭಟ್ಟಿ ಸಾರಾಯಿ ಹಾಗೂ 21.250 ಲೀ. ಡಿಫೆನ್ಸ್ ಮದ್ಯ ಜಪ್ತುಪಡಿಸಲಾಗಿರುತ್ತದೆ. |

**ಆಇ 79 ಇಎಲ್‌ಕ್ಯೂ 2022**

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 14/09/2022 12:53 PM